**ಓ.ಎಸ್. ನಂಬರ್ : 46/2023**
**ಪಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 02.06.2026

**ಪಾಟೀ ಸವಾಲು : ಪ್ರತಿವಾದಿಯ ಪರವಾಗಿ ಶ್ರೀ ಎಂ.ಎಂ.ಕೆ ವಕೀಲರಿಂದ**

ಪ್ರತಿವಾದಿ ನನಗೆ ಸುಮಾರು 18 ವರ್ಷಗಳಿಂದ ಪರಿಚಯ. ಅವರಿಗೆ ಶುಂಠಿಕೊಪ್ಪದ ಹತ್ತಿರ ಆಸ್ತಿ ಇರುತ್ತದೆ. ಸದರಿ ಆಸ್ತಿ ಅವರ ಕುಟುಂಬದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂಬುದನ್ನು ನಾನು ನೋಡಿರುವುದಿಲ್ಲ. ಸದರಿ ಆಸ್ತಿ ಅವರ ಹೆಸರಿನಲ್ಲಿದೆ ಎಂಬುದವರ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಪರಿಶೀಲನೆ ಮಾಡಿರುವುದಿಲ್ಲ. ಅವರ ಆಸ್ತಿಯನ್ನು ನನಗೆ ಮಾರಾಟ ಮಾಡುತ್ತಾರೆ ಎಂಬುದವರ ಬಗ್ಗೆ ಯಾವುದೇ ಕರಾರು ಪತ್ರವನ್ನು ನನಗೆ ಬರೆದುಕೊಟ್ಟಿರುವುದಿಲ್ಲ.

ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆಸ್ತಿಯನ್ನು ಖರೀದಿ ಮಾಡಬೇಕಾದರೆ ಮತ್ತು ಖರೀದಿ ಮಾಡಲು ಹಣ ಕೊಡಬೇಕಾದರೆ ಬರವಣಿಗೆ ಮಾಡಿಕೊಳ್ಳಬೇಕು ಎಂಬ ಸಾಮಾನ್ಯ ತಿಳುವಳಿಕೆ ಇದೆ ಅಂದರೆ ಅವರು ಪರಿಚಯಸ್ಥರಾಗಿದ್ದರಿಂದ ಆ ಬಗ್ಗೆ ನಾನು ಗಮನ ಕೊಡಲಿಲ್ಲ ಎನ್ನುತ್ತಾರೆ. ಎಕರೆಗೆ ರೂ.15,00,000/- ದಂತೆ 2 ಅಥವಾ 3 ಎಕರೆ ಆಸ್ತಿಯನ್ನು ನನಗೆ ಮಾರಾಟ ಮಾಡುತ್ತೇನೆ ಎಂದು ಹೇಳಿರುತ್ತಾರೆ. ಇಷ್ಟೇ ಹಣ ಮತ್ತು ಇಷ್ಟೇ ಎಕರೆ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ನಿರ್ದಿಷ್ಟವಾಗಿ ಹೇಳಿಲ್ಲ ಅಂದರೆ ನಾನು 3 ಎಕರೆ ಕೇಳಿದ್ದೆ ಎನ್ನುತ್ತಾರೆ. ನಾನು ರೂ. 22,50,000/-

ಹಣವನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆ. ಸದರಿ ಹಣವನ್ನು ನಾನು ಒಟ್ಟಿಗೆ ನಗದು ರೂಪದಲ್ಲಿ 2022 ರಲ್ಲಿ ಅಕ್ಟೋಬರ್ ತಿಂಗಳಲ್ಲಿ ಕೊಟ್ಟಿರುತ್ತೇನೆ.

ನನ್ನ ಬಳಿ ಬ್ಯಾಂಕ್ ಖಾತೆ ಇದೆ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಖಾತೆ ಇದೆ. ಸದರಿ ಹಣವನ್ನು ಚೆಕ್ಕು ರೂಪದಲ್ಲಿ ಕೊಡಲು ತೊಂದರೆ ಇತ್ತಾ ಅಂದರೆ ನಾನು ನಗದು ರೂಪದಲ್ಲಿ ಎಲ್ಲಾ ವ್ಯವಹಾರವನ್ನು ಮಾಡಿರುತ್ತೇನೆ. ಚೆಕ್ಕು ರೂಪದಲ್ಲಿ ಅಲ್ಲ ಎನ್ನುತ್ತಾರೆ. ನಾನು ಈಗ ಆದಾಯ ತೆರಿಗೆದಾರನಾಗಿರುತ್ತೇನೆ. ನಾನು ಹಣ ಕೊಟ್ಟ ಬಗ್ಗೆ ಆದಾಯ ತೆರಿಗೆ ವಿವರದಲ್ಲಿ ಹೇಳಿರುತ್ತೀರಾ ಅಂದರೆ ಆ ಸಮಯದಲ್ಲಿ ನಾನು ಆದಾಯ ತೆರಿಗೆ ಪಾವತಿದಾರನಲ್ಲ ಎನ್ನುತ್ತಾರೆ.

2016 ರಲ್ಲಿ ನೋಟುಗಳ ಅಮಾನ್ಯಗೊಂಡ ಬಗ್ಗೆ ನನಗೆ ಗೊತ್ತು. ಅಲ್ಲದೇ 2016 ರ ನಂತರ ನಡೆಯುವ ಯಾವುದೇ ವ್ಯವಹಾರ ರೂ. 2,00,000/- ಮೇಲ್ಪಟ್ಟಿದ್ದರೆ ಅದನ್ನು ಚೆಕ್ಕು ರೂಪದಲ್ಲಿ ಮಾಡಬೇಕು ಎಂದು ಸರ್ಕಾರ ನಿರ್ದೇಶನ ನೀಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ತರಕಾರಿ ವ್ಯಾಪಾರ ಮಾಡುತ್ತಿದ್ದು ಅಂಗಡಿಗಳನ್ನು ನಡೆಸುತ್ತಿದ್ದೇನೆ. ನನ್ನ ಅಂಗಡಿ ವ್ಯವಹಾರಗಳ ಬಗ್ಗೆ ಯಾವುದೇ ಲೆಕ್ಕ ಪುಸ್ತಕಗಳನ್ನು ಇಟ್ಟಿಕೊಂಡಿರುವುದಿಲ್ಲ. ನನ್ನ ವಾರ್ಷಿಕ ಆದಾಯ ಮತ್ತು ವೆಚ್ಚದ ಅಂದಾಜು ಮಾಹಿತಿ ಇದೆಯಾ ಅಂದರೆ ತಿಂಗಳಿಗೆ ರೂ.15,00,000/- ಲಕ್ಷದ ವ್ಯವಹಾರ ನಡೆಯುತ್ತದೆ. ಪ್ರತಿವಾದಿ ನನಗೆ ಮಾರ್ಚ್ 2023 ರಲ್ಲಿ ನನಗೆ ಚೆಕ್ಕನ್ನು ಕೊಟ್ಟಿರುತ್ತಾರೆ. ನನಗೆ ಇಂತಿಷ್ಟೇ

ಹಣವನ್ನು ಕೊಡುವ ಆರ್ಥಿಕ ಸಾಮರ್ಥ್ಯ ಇದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿ ನನಗೆ ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕಿನ ಚೆಕ್ಕನ್ನು ಕೊಟ್ಟಿರುತ್ತಾರೆ. ಸದರಿ ಬ್ಯಾಂಕ್ ಕುಶಾಲನಗರದಲ್ಲಿ ಇದೆ ಎನ್ನುತ್ತಾರೆ. ಸದರಿ 2018 ರಲ್ಲಿ ಕಾರ್ಯ ವ್ಯಾಪ್ತಿ ನಿಲ್ಲಿಸಿ ಕಾವೇರಿ ಗ್ರಾಮೀಣ ಬ್ಯಾಂಕ್ ಎಂದು ಮರುನಾಮಕರಣಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2018 ರಿಂದ ಈಚೆಗೆ ಕೊಡುವ ಚೆಕ್ಕುಗಳು ಕಾವೇರಿ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟವು ಅಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಚೆಕ್ಕನ್ನು ನನ್ನ ಬ್ಯಾಂಕ್ ಖಾತೆಯಾದ ಸೆಂಟ್ರಲ್ ಬ್ಯಾಂಕ್ ಕುಶಾಲನಗರ ಬ್ರಾಂಚಿನಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಚೆಕ್ಕು ಖಾತೆ ಮುಚ್ಚಿರುತ್ತದೆ ಎಂದು ವಾಪಸ್ಸು ಬಂದಿರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
***ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,***
***ಸೋಮವಾರಪೇಟೆ.***